# ಮೇಘಮಲ್ಹಾರ

ನಾನು ಬಹಳ ಹಿಂದೆ ಮಲೆನಾಡ ನಡುವಿನ ವಸತಿಶಾಲೆಯಲ್ಲಿ ಓದುತ್ತಿರುವಾಗ ಮೊದಲ ಮಳೆಯೆಂದರೆ.... ಏಪ್ರಿಲ್‌ನ ದಿನಗಳಲ್ಲಿ ಅಂಥಾ ಮಲೆನಾಡಿನಲ್ಲೂ ಸಳ ಸಳ ಬೆವರು, ಮರಗಿಡಗಳೆಲ್ಲ ಬೋಳು, ಬೋಳು. ಮಳೆಯ ಗರ್ಭಕಟ್ಟುವ ದಿನ ಬೆಳಿಗ್ಗೆಯಂತೂ ಸುಡು ಸುಡು ಬಿಸಿಲು, ಎಲ್ಲರ ಬಾಯಲ್ಲಿ 'ಇವತ್ತು ಮಳೆ ಹೊಡೆಯುತ್ತೆ!' ಎಂಬ ಭವಿಷ್ಯವಾಣಿ, ಮಧ್ಯಾಹ್ನದ ಹೊತ್ತಿಗೆ ಮೋಡಗಳೇ ಇರದಿದ್ದ ಸುಡುನೀಲಿ ಆಗಸದಲ್ಲಿ ಮೋಡಗಳ ಸಂಚಲನ; ಮೊದಮೊದಲು ಸಣ್ಣ ಸಣ್ಣ ಮೋಡಗಳು, ನಂತರ ಬೃಹದಾಕಾರದ ಕಪ್ಪು ಮೋಡಗಳು, ಚಳುವಳಿಗೆ ಆಗಮಿಸುತ್ತಿರುವ ಜನರಂತೆ ಮೆಲ್ಲನೇ ಒಗ್ಗೂಡುತ್ತವೆ. ಊಟದ ಮನೆಯಲ್ಲಿ ಎಲ್ಲರ ಹಣೆಯಲ್ಲಿ ಬೆವರು, ಸೆಖೆಯಿಂದಾಗಿ ಮಾತೇ ಹೊರಡದ ಮೌನ ಕೂಟ.

ಆಮೇಲೆ ಶುರುವಾಗುತ್ತವೆ ಸುಳಿಗಾಳಿಗಳು, ಭರ್ರನೇ ಎಲ್ಲಿಂದಲೋ ಹುಟ್ಟಿಕೊಂಡು ಒಣಹಾಕಿದ್ದ ಬಟ್ಟೆ ಬರೆಗಳು, ತರಗೆಲೆಗಳು, ಧೂಳನೆಲ್ಲ ಕಸಿದುಕೊಂಡು ಸುತ್ತಿ-ಸುತ್ತಿಸಿ ತಟ್ಟನೆ ಬಯಲ ಮಧ್ಯಕ್ಕೊಯ್ದು ತಟಸ್ಥವಾಗುತ್ತವೆ; ಮತ್ತೆಲ್ಲೋ ಶುರುವಾಗುತ್ತವೆ. ನಮಗೆ ಸುಂಟರಗಾಳಿಯದೇ ಅಚ್ಚರಿ, ಬೆಳಕು ಮಂದವಾಗುತ್ತದೆ, ಆಕಾಶದಲ್ಲೀಗ ಒಂದಿನಿತೂ ನೀಲಿಯಿಲ್ಲ; ಕಾರ್ಖಾನೆಯ ಕಪ್ಪುಹೊಗೆ ವ್ಯಾಪಿಸಿದಂತೆ. ಎಲ್ಲರೂ ಹೊರಹಾಕಿದ್ದ ಬಟ್ಟೆಗಳನ್ನು ಆರಿಸಿಕೊಳ್ಳುತ್ತಿದ್ದಾರೆ; ಮಳೆಗೆ ಮುನ್ನ ಸ್ಕೂಲು-ರೂಮು ತಲುಪಲು ಓಡುತ್ತಿದ್ದಾರೆ; ರೂಮಿನಲ್ಲಿ ಮಡಿಸಿಟ್ಟಿದ್ದ ಚತ್ರಿ, ರೈನ್‌ಕೋಟ್‌ಗಳ ಹೊರತೆಗೆದು ಮಡಿಕೆ ಬಿಡಿಸಿ ಧೂಳು ಕೊಡವುತ್ತಿದ್ದೇವೆ. ಯುದ್ಧದ ಮುಂಚಿನ ಉದ್ಘೋಷದಂತೆ ಶುರುವಾಗಿದ್ದ ಸುಂಟರಗಾಳಿಗಳೂ ಶಕ್ತಿಕಳೆದುಕೊಂಡು, ಸಣ್ಣದಾಗುತ್ತವೆ;
ಕ್ಷಣದಲ್ಲಿ ಹುಟ್ಟಿ, ಅಲ್ಲೇ ಬಯಲಲ್ಲಿ ಕ್ಷಣಾರ್ಧದಲ್ಲಿ ಸತ್ತೂ ಬಿಡುತ್ತವೆ. ದೂರದಾಗಸದಲ್ಲಿ ಹಕ್ಕಿಗಳ ಹಿಂಡೊಂದು ತ್ವರೆಯಿಂದ ಹಾರುತ್ತಿದೆ; ಈಗ ಗಾಳಿಯಿಲ್ಲದ, ಸಂಚಲನೆಯಿಲ್ಲದ, ಉಸಿರುಕಟ್ಟಿಸುವಂತಹ ಧ್ಯಾನ ಮೌನ, ಪ್ರಪಂಚವೇ ಸ್ತಬ್ಧವಾದಂತೆ ಪ್ರಳಯಕಾಲದ, ಮಹಾ ಉತ್ಪಾತದ ಮುಂಚಿನ ಸಮಯದಂತೆ ಅನಿಸುತ್ತದೆ. ನಂತರ ದೂರದಂಚಿನಲ್ಲಿ ಹರಿದುಕೊಂಡ ಮೋಡ ಕಾಣುತ್ತದೆ; ಕಡುಬೂದಿ ಬಣ್ಣದ ತೆರೆಯೊಂದು ಮೋಡಗಳಿಂದ ಶುರುವಾಗಿ ನಮಗೆ ಕಾಣದ ದೂರದ ನೆಲಮುಟ್ಟಿದೆ; ಆಕ್ರಮಣ ಶುರುವಾಗಿದೆ, ಮಳೆ ಶುರುವಾಗಿದೆ!

ನಂತರ ತಟ್ಟನೆ, ಮದ್ದುಗುಂಡುಗಳ ಆಕ್ರಮಣವಾದಂತೆ ಚಟಚಟನೆ ಶುರುವಾಗುವ ಮಳೆಹನಿಗಳು ನಿಮಿಷಾರ್ಧದಲ್ಲಿ ಭೋರ್ಗರೆಯುವ ಜಡಿಮಳೆಯಾಗುತ್ತವೆ. ಹನಿಗಳ ರಭಸ, ನಿಜವಾಗಿಯೂ ನೆಲವ ಸೀಳಿ, ಅಡಗಿದ್ದ ಬೇಸಿಗೆಯ ಬಿಸಿಯನೆಲ್ಲ ಬಗೆದುಹಾಕುವಂತಿದೆ. ಕಿಟಕಿಯಿಂದ ಕೈ ಹೊರಹಾಕಿದರೆ ಕೈಯನ್ನೇ ಕೆಳಕ್ಕದುಮುವಂತಹ ಭರ್ಜರಿ ಮಳೆ, ಕಿಟಕಿಯಿಂದೊಳಗೆ ಹೆಚ್ಚಾಗುವ ಸಳ ಸಳ!

ಮೆಲ್ಲನೆ, ಮೊದಲಿಗೆ ಬಹಳ ನವಿರಾಗಿ, ನಂತರ ಗಾಢವಾಗಿ, ಬಿಸಿಲಲ್ಲಿ ಸುಟ್ಟು ಮಳೆಯಲ್ಲಿ ತೊಯ್ದ ಮಣ್ಣಿನ ಸುವಾಸನೆ ಎಲ್ಲರನ್ನೂ ವ್ಯಾಪಿಸಿ ಕೊಳ್ಳುತ್ತದೆ, ಎಲ್ಲರಲ್ಲೂ ಆಹ್ಲಾದ ಮೂಡಿಸುತ್ತದೆ. ಮಳೆಗೆ ಸಿಕ್ಕು ಓಡಿಬಂದವರು ನಗುತ್ತಿದ್ದಾರೆ, 'ಏನು ಫೋರ್ಸು ಮಾರಾಯ! ಮೈಯನ್ನೆಲ್ಲ ಜರಡಿ ಮಾಡಿ ಹಾಕುವಂತಿದೆ!' ಮುಂದಿನರ್ಧ ಗಂಟೆಯಲ್ಲಿ ಬಯಲ ತುಂಬೆಲ್ಲ, ರೂಮುಗಳ ಇಕ್ಕೆಲದಲ್ಲೂ ಹರಿಯುವ ನೀರಿನ ಝರಿಗಳ ಸೃಷ್ಟಿಯಾಗುತ್ತದೆ. ಸ್ನೇಹಿತನೊಬ್ಬ ಕಿರುಚುತ್ತಾನೆ, 'ಅಯ್ಯಯ್ಯೋ ನನ್ನ ಶರ್ಟು ನೋಡ್ರೋ, ಒಣಹಾಕಿದ್ದು ಮರ್ತೇಬಿಟ್ಟಿದ್ದೆ!' ಅವನ ಶರ್ಟು ನೀರಿನಲ್ಲಿ ಮುಳುಗೇಳುತ್ತಿರುವ ದೋಣಿಯಂತೆ ಕಾಣುತ್ತಿದೆ; ತನ್ನ ಗಮ್ಯದೆಡೆಗೆ ಸಾಗುತ್ತಿದೆ.

ರಾತ್ರಿಯಾದರೂ ಮಳೆ, ಅದರ ರಭಸ ಕಮ್ಮಿಯಾಗಿಲ್ಲ. ಸದ್ಯಕ್ಕೆ ಕಡಿಮೆಯಾಗುವ ಲಕ್ಷಣಗಳನ್ನೂ ತೋರದೇ ತನ್ನ ಸುರಿಯುವಿಕೆಯಲ್ಲೂ ಒಂದು ಹಿತವಾದ ತಾನ ಹಿಡಿದುಕೊಂಡಿದೆ. ಕರೆಂಟು ಮಳೆಮೋಡವಾದಾಗಲೇ ಹೊರಟು ಹೋಗಿದೆ, ಹೊರಹೋಗಲು ಎಲ್ಲರೂ ಚತ್ರಿ-ರೈನ್‌ಕೋಟುಗಳ ಆಶ್ರಯಿಸಿದ್ದಾರೆ, ಇಲ್ಲದವರು ಇರುವ ಸ್ನೇಹಿತರ ಬೇಡುತ್ತಿದ್ದಾರೆ, ಗಾಳಿಯಿಲ್ಲದೇ ಸೆಖೆ ಇನ್ನೂ ಹೆಚ್ಚಾಗಿದೆ...

ಹೀಗೆ ಶುರುವಾದ ಮಳೆ, ಎಷ್ಟೋ ದಿನ ಸುರಿದು ಒಂದು ದಿನ ಬೆಳಿಗ್ಗೆ ಥಟ್ಟನೆ ನಿಂತು ಎಲ್ಲ ಫಳ ಫಳ. ಹೊಂಬಿಸಿಲು ನೋಡಿ ಎಲ್ಲರಿಗೂ ಖುಷಿ, ಹಸಿರೊಡೆದ ಭೂಮಿ ನಳನಳಿಸುತ್ತದೆ!

ಆಷಾಢದ ಪಿರಿಪಿರಿ ಮಳೆ ಮುಗಿದು ಶ್ರಾವಣ ಹತ್ತುವ ಹೊತ್ತಿಗೆ ಮಳೆಯ ಜೊತೆ ಚಳಿಗಾಳಿಯೂ ಸೇರಿಕೊಂಡಿರುತ್ತದೆ, ಮುಚ್ಚಿಟ್ಟಿದ್ದ ಹೊದಿಕೆ, ಸ್ವೆಟರುಗಳನೆಲ್ಲ ಹೊರತೆಗೆಸುತ್ತದೆ. ಕ್ಯಾಸೆಟ್-ಟೇಪುಗಳ ಮೇಲೆಲ್ಲ ಆಗಲೇ ಬಿಳಿ ಬಿಳೀ ಪುಡಿ, ಚರ್ಮದ ಬೆಲ್ಟುಗಳು ಮುಗ್ಗಲು ವಾಸನೆ ಹೊಡೆಯುತ್ತವೆ. ಒಗೆದ ಬಟ್ಟೆಗಳು ವಾರವಾದರೂ ಒಣಗುವುದಿಲ್ಲ, ರೂಮಿನಲ್ಲಿ ಒಬ್ಬನಿಗೆ ಹಿಡಿದ ಶೀತ ಒಬ್ಬರಿಂದೊಬ್ಬರಿಗೆ ವರ್ಗಾವಣೆಗೊಂಡು ಎಲ್ಲರೂ ಬಳಲಿದ ಮೇಲೆಯೇ ಜಾಗ ಖಾಲಿ ಮಾಡುತ್ತದೆ! ಚಪ್ಪಲಿಗಳು, ಬಿಳೀ ಬಟ್ಟೆಗಳ ಮೇಲೆಲ್ಲ ಸಣ್ಣ ಸಣ್ಣ ಕಪ್ಪುಚುಕ್ಕಿಗಳ ಬೂಸ್ಟು. ನೀರಿನಲ್ಲಿ ನೆನೆನೆನೆದು
ಸೆಲೆತುಕೊಳ್ಳುವ, ತಿಳಿಗುಲಾಬಿ-ಬಿಳೀ ಬಣ್ಣಕ್ಕೆ ತಿರುಗುವ ಕಾಲ್ಬೆರಳ ಸಂದಿಗಳು, ಅದರ ಉಪಶಮನಕ್ಕೆ ಹಚ್ಚಿಕೊಳ್ಳುವ

ಕಡುನೀಲಿಬಣ್ಣದ ಔಷಧಿ! ಗೊತ್ತೇ ಆಗದಂತೆ ಕಾಲಿಗೆ ಹತ್ತಿಕೊಂಡು, ರಕ್ತಹೀರಿ, ಉದುರಿಹೋದ ಜಿಗಣೆಗಳು, ಅವು ಕಚ್ಚಿದ ಗಾಯಗಳಲ್ಲಿ ಹೆಪ್ಪುಗಟ್ಟದೇ ಸುರಿಯುವ ಧಾರಾಕಾರ ರಕ್ತ, ಕಚ್ಚಿಕೊಂಡ ಜಿಗಣೆಗಳ ಬಿಡಿಸಲು ಶತಪ್ರಯತ್ನ, ಹಲಸಿನ ಹಣ್ಣು, ಹಲಸಿನ ದೋಸೆ, ಹಳ್ಳಿಯ ಒಂದೇ ಒಂದು ಆಸ್ಪತ್ರೆಯಲ್ಲಿ ಜನರ ಸರತಿ ಸಾಲು....

ಇವೆಲ್ಲದರ ಜೊತೆಗೆ ನಾನೂ ನನ್ನ ಕೆಲವು ಸ್ನೇಹಿತರೂ ಕೈಗೊಳ್ಳುತ್ತಿದ್ದ ಧಾರಾಕಾರ ಮಳೆಯ ವಾಕಿಂಗ್! ......

ಮತ್ತೆ ಮಳೆ ಹೊಯ್ಯುತಿದೆ, ಎಲ್ಲ ನೆನಪಾಗುತ್ತಿದೆ...!